Doc-41
7-P-2

(1)

R No KRNN 12 ಶ್ರೀ 13 -3-75

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

In ★ ★ ★ ★ ★
58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee
Celebrated Paper
Satyavadi Daily
Mysore 4
– For Influential Publicity –

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್   ಸಂಪಾದಕರು ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್   3 ಪೈಸೆ

ಬೆಂಗಳೂರಿಗೆ ಪ್ರದೇಶ ಕಾಂಗ್ರೆಸ್ ಸಮಿತಿ ಮಟ್ಟದ ಅಪೇಕ್ಷೆ

ಧರ್ಮಬೋಧೆ

ವಿಶೇಷವಾಗಿ ಲೋಕಹಿತ ಬಯಸುವ ದೊಡ್ಡ ಮನುಷ್ಯರು, ವಿಶಾಲವಾದ ಹಾಗೂ ಉದಾರವಾದ ಮನೋಭಾವನೆಯನ್ನು ಹೊಂದಿರುವವರು ಲೋಕಮರ್ಯಾದೆಯನ್ನು ಅನುಸರಿಸಿ— ಹಿಂದಿನವನ್ನು ಬಿಡದೆ, ಮುಂದಿನವರಿಗೆ ಉದಾಹರಣೆಯಾಗುವಂತಹ ಉದಾರ ಪ್ರವೃತ್ತಿಯ ನಡವಳಿಕೆಯನ್ನು ನಡೆಸುತ್ತಾ ಜಾಗ್ರತರಾಗಿರಬೇಕು ; ಅದರಿಂದ ಧರ್ಮವು ವೃದ್ಧಿಯಾಗುತ್ತದೆ ; ಉಳಿದವರೂ ಅವರನ್ನು ಅನುಸರಿಸಿ ನಡೆಯುತ್ತಾರೆ. — ಪದ್ಮಪುರಾಣ

★

ಸಂಗಪ್ಪನ ಕಳವರ ಎಂಬ 3 ವರ್ಷದ ಬಾಲಕನನ್ನು ಕತ್ತೆ ಕಿರುಬ ಎತ್ತಿಕೊಂಡು ಹೋಗಿ ತಿಂದಿರುವದಾಗಿ ಬಾಗಲಕೋಟೆ ವಾರ್ತೆ. ಗ್ರಾಮಸ್ಥರಲ್ಲಿ ಇದರಿಂದ ಭಯವಾಗಿದೆ.

ವುಡ್‌ಲಾಂಡ್ಸ್ 7 3 75 ರಿಂದ

ಅಮೋಘ 2 ನೇ ವಾರ

ದಾರಿ ತಪ್ಪಿದ ಮಗ

ಅಪೂರ್ವ ಕನ್ನಡ ಕಲಾಕೃತಿ   ಪಾತ್ರ– ರಾಜಕುಮಾರ್ (ದ್ವಿಪಾತ್ರದಲ್ಲಿ)
ವಜ್ರಮುನಿ, ಅಶ್ವತ್ಥ್, ಬಾಲಕೃಷ್ಣ, ಕಲ್ಪನ, ಆರತಿ   ದಿನ 3 ಪ್ರದರ್ಶನಗಳು

ಅಪೆರಾ 7 3 75 ರಿಂದ

ಅಪರಾಧಿ

ಅಮೋಘ ಹಿಂದಿ ಕಲರ್ ಚಿತ್ರ

ಪಾತ್ರ – ಯೋಗೀತಾಬಾಲಿ ಕಿರಣಕುಮಾರ್   ದಿನ 3 ಪ್ರದರ್ಶನಗಳು

ಸಮನಾದ ಸಂಬಳ

ಹೆಣ್ಣು ಗಂಡು ಎಂಬ ತಾರತಮ್ಯ ಇಲ್ಲದೆ ಕೆಲಸಕ್ಕೆ ಸಮನಾದ ಸಂಬಳ ಕೊಡುವ ಮಸೂದೆಯನ್ನು ಬೇಗನೆ ಸಂಸತ್‌ನಲ್ಲಿ ಇಡಲಾಗುವದೆಂದು ನವ ದೆಹಲಿ ವಾರ್ತೆ ತಿಳಿಸುತ್ತದೆ.

★

ರಾಷ್ಟ್ರೀಕರಣಕ್ಕೆ ಒತ್ತಾಯ

ರಾಜ್ಯಸಭೆಯಲ್ಲಿ ಜನಸಂಘದ ಸದಸ್ಯರಾದ ಶ್ರೀ ಸುಬ್ರಹ್ಮಣ್ಯಸ್ವಾಮಿಯವರು ಮಾತನಾಡುತ್ತಾ, ದೇಶದಲ್ಲಿರುವ ವಿದೇಶಿ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ತಿಳಿಸಿದರು.

★

ಮುಖ್ಯ ಮಂತ್ರಿಗಳ ಭರವಸೆ

ಬೆಂಗಳೂರಿನಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದಲ್ಲಿ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸರು ಭಾಷಣ ಮಾಡುತ್ತ ಸರ್ಕಾರಿ ಕೆಲಸಗಾರರಿಗೆ ಕೇಂದ್ರ ಮಟ್ಟದಲ್ಲಿ ತುಟ್ಟಿಭತ್ಯ ಕೊಡುವ ಕುರಿತು ತಿಂಗಳೊಂದರಲ್ಲಿ ನಿರ್ಧಾರ ಮಾಡುವದಾಗಿ ತಿಳಿಸಿದರು.

★

ಅಪಘಾತದಲ್ಲಿ ಮರಣ

ಕಾರ್ಗಲ್‌ನಿಂದ ಬಂದಿರುವ ವರದಿಯ ಪ್ರಕಾರ, ತಲಕಳಲೆಗೆ ಹತ್ತಿರದ ಮಲ್ಲಕಿ ಎಂಬಲ್ಲಿ ಆದ ಲಾರಿ ಅಪಘಾತದಲ್ಲಿ ಸ್ಥಳದಲ್ಲೇ ಒಬ್ಬರು ಸತ್ತರು.

★ ಅರಸೀಕೆರೆ ತಾಲ್ಲೂಕು ಮಂಡಲಿಯಲ್ಲಿ ಮುಂದಿನ ಸಾಲಿನ ಅಂದಾಜುಪಟ್ಟಿಯಲ್ಲಿ 1 ಲಕ್ಷ ರೂಪಾಯಿ ಉಳಿತಾಯ ಕಂಡಿದೆ.

ಆಯುಧ ಕಾರ್ಖಾನೆ ಪತ್ತೆ

ರಾಯ್ಪುರದ 7 ಪ್ರದೇಶಗಳಲ್ಲಿ 7 ಸಣ್ಣ ಆಯುಧ ಕಾರ್ಖಾನೆಗಳು ಪತ್ತೆ ಆಗಿರುವದು.

ಕಾಂಗ್ರೆಸಿಗರ ಒತ್ತಾಯ

ಬೊಂಬಾಯಿ ಮಾದರಿಯಂತೆ ಬೆಂಗಳೂರು [illegible]ಕ್ಕೆ ಆದ ವಿಶಿಷ್ಟ ಸ್ಥಾನಮಾನ ಗಮನಿಸಿ ಪ್ರದೇಶ ಕಾಂಗ್ರೆಸಿನ ಸ್ಥಾನಮಾನ ಕೊಡಬೇಕೆಂದು ಬೆಂಗಳೂರು ನಗರ ಜಿಲ್ಲ ಕಾಂಗ್ರೆಸ್ ಸಮಿತಿ ಕಾಂಗ್ರೆಸ್ ಅಧ್ಯಕ್ಷರನ್ನು ಒತ್ತಾಯ ಮಾಡಿದೆ.

ಸೇವೆ ಎರವಲು

ಭೂ ಸೇನಾ ಸಂಸ್ಥೆಗೆ ಲೋಕೋಪಯೋಗಿ ಇಲಾಖೆಯ ಅಸಿಸ್ಟೆಂಟ್ ಇಂಜಿನಿಯರ್ ಶ್ರೀ ಸಿ ಬಿ ಗುಪ್ತಲ್‌ರವರ ಸೇವೆಯನ್ನು ಎರವಲು ನೀಡಲಾಗಿದೆ.

ಸಾಲದ ಪ್ರಮಾಣ ಏರಿಕೆ

ಕರ್ನಾಟಕ ರಾಜ್ಯದಲ್ಲಿ ದ್ರಾಕ್ಷಿ ಬೆಳೆಗೆ ನೀಡುವ ಸಾಲವನ್ನು 12 ಸಾವಿರ ರೂಪಾಯಿಗಳಿಂದ ಹದಿನೈದು ಸಾವಿರ ರೂಪಾಯಿಗಳಿಗೆ ಏರಿಸಿರುವದಾಗಿ ಬೆಂಗಳೂರು ವರದಿಯೊಂದು ತಿಳಿಸುತ್ತದೆ.

ಇಂದಿರಾ ಶಿಶುವಿಹಾರ

ಕರ್ನಾಟಕ ರಾಜ್ಯದಲ್ಲಿ ಚುನಾವಣೆಯ ಕ್ಷೇತ್ರಕ್ಕೆ ಒಂದರಂತೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಹೆಸರಿನಲ್ಲಿ ಶಿಶುವಿಹಾರ ತೆರೆಯಲು ಪ್ರದೇಶ ಕಾಂಗ್ರೆಸ್ ಸಮಿತಿ ಉದ್ದೇಶಿಸಿದೆ. 216 ಶಿಶು ವಿಹಾರಗಳನ್ನು ಸ್ಥಾಪಿಸಲಾಗುವದು.

ಸೊಳ್ಳೆಕಾಟ ಉಪವಾಸ

ಭಾರತೀಯ ಲೋಕದಳ ನಾಯಕರಾದ ಶ್ರೀ ಇಂದ್ರಕುಮಾರರು ಬಿಹಾರದ ಆರೋಗ್ಯ ಮಂತ್ರಿ ಶ್ರೀ ರಾಮಾಶ್ರಯ ಪ್ರಸಾದರ ಮನೆಯ ಮುಂದೆ ಒಂದು ದಿನ ಉಪವಾಸ ಮಾಡುವರು ಸೊಳ್ಳೆ ಕಾಟ ಪ್ರತಿಭಟಿಸಿ ಈ ನಿರ್ಧಾರವೆಂದು ಪಾಟ್ನಾ ವಾರ್ತೆ.

● ಕಾಶ್ಮೀರವನ್ನು ಭಾರತ ಕಳವು ಮಾಡಿದೆ ಎಂದು ಚೀಣಾ ಆಪಾದಿಸಿದೆ.

ಪತಿಯ ಮಾನಮರ್ಯಾದೆ ಕಾಪಾಡಿದ ಮಹಿಳೆ

★

(ಮುಂದುವರಿದುದು)

ಹೆಂಡತಿ ಉತ್ತರಿಸಿದಳು– ನೀನು ಹೇಳುವುದು ನಿಜ ; ಆದರೆ ನನ್ನ ಪತಿಯ ಗೌರವಕ್ಕೆ ಇದೊಂದೂ ಹೋಲಿಸತಕ್ಕವಲ್ಲ. ನನ್ನಲ್ಲಿ ಕೆಲವು ಆಭರಣಗಳಿವೆ ; ಬಸ್ತಿಗಳಲ್ಲಿರಲು 2–3 ವರ್ಷಗಳಿಗೆ ಸಾಕಾಗುತ್ತದೆ ; ಏನೇ ಆಗಲಿ ಇಲ್ಲಿ ಇರುವುದಕ್ಕಿಂತ ಹೊಟ್ಟೆಗಿಲ್ಲದೆ ನಾನು ಸಾಯುತ್ತೇನೆ. ಕಡೆಗೆ ಘೋಷ್ ಮನಸ್ಸಿಲ್ಲದೆ ಒಪ್ಪಿಕೊಂಡನು.

ಅವರು ಮನೆಬಿಟ್ಟು ಹೊರಡುವುದರಲ್ಲಿದ್ದರು. ಈ ವಾರ್ತೆ ಹರಡಿ, ಮಾಲಿಗಿದ್ದವರೆಲ್ಲರೂ ಬೇಗಬೇಗ ಎದ್ದು, ಇವರು ಹೊರಟುಹೋಗುವುದನ್ನು ನಿಲ್ಲಿಸಲು ಬಂದರು. ತಂದೆಯು ಒಳ್ಳೇ ಮಾತಿನಲ್ಲಿ ಹೇಳಿದ ಮತ್ತು ಕೋಪಗೊಂಡ; ತಾಯಿ ಗೋಗರೆದಳು ಮತ್ತು ಅತ್ತಳು ; ಸೋದರರು ಮತ್ತು ಸೋದರಿಯರು ವಾಗ್ವಾದ ಮಾಡಿದರು ; ಏನೊಂದೂ ಪ್ರಯೋಜನವಾಗಲಿಲ್ಲ. ಅವರು ಮನೆಯಿಂದ ಹೊರಟೇ ಹೋದರು ; ಸಮೀಪದಲ್ಲಿ ಒಂದು ಕೀಳು ದರ್ಜೆಯ, ಕಗ್ಗತ್ತಲೆಯ ಕೊಳಕು ಜೋಪಡಿಯಲ್ಲಿ ನೆಲೆಸಿದರು. ವರ್ಷಗಳು ಉರುಳಿದವು ; ಘೋಷ್ ದೇಶದಲ್ಲೇ ಅತಿ ಬಡತನದ ಜೀವಿತ ನಡೆಸುತ್ತಿದ್ದನು ; ಆದರೆ ಅವನ ಪತ್ನಿಯ ಬುದ್ಧಿ ಮಾತುಗಳಿಂದ ಅವನ ನಡತೆಯಲ್ಲಿ ಬದಲಾವಣೆಗೊಂಡಿತು.

ಮಿತ್ತರ್‌ರರು ಸೆಣಬಿನ ವ್ಯಾಪಾರ ನಡೆಸುತ್ತಿದ್ದರು ; ಅವರ ಗಿರಾಕಿಗಳು ಅವರಿಗೆ ಸಂತೋಷ ಉಂಟುಮಾಡಲು ಅವರ ಅಳಿಯ ಘೋಷ್‌ರು ಸ್ವಲ್ಪ ಹಣ ಸಂಪಾದಿಸಲು ಸಹಾಯಮಾಡಲು ಕೋರಿದರು. ನಂತರ ಆಶ್ಚರ್ಯ ಘಟನೆ ಸಂಭವಿಸಿತು. ಅಪ್ರಯೋಜಕ, ಏತಕ್ಕೂ ಬಾರದ ಘೋಷ್ ಹೊಸ ಮನುಷ್ಯನಾದನು ; ಸೆಣಬಿನ ದರ್ಜೆ ತಿಳಿಸುವಷ್ಟು ಸಮರ್ಥನಾಗಲು ಇವನಿಗೆ ಕೇಳಿಕೆ ಹೆಚ್ಚಾಯಿತು. ನೂರು ಅಡಿ ದೂರದಿಂದಲೇ ಆ ಸೆಣಬು ರೂ 8–4–0 ದರದ್ದು ಅಥವಾ ರೂ. 7–12–0 ದರದ್ದು ಎಂದು ಹೇಳಬಲ್ಲವನಾಗಿದ್ದನು. ಈ ವಿಚಾರದಲ್ಲಿ ನಿಪುಣರಲ್ಲಿ ಅತಿ ಅನುಭವಶಾಲಿಯಾದನು. ಸೆಣಬಿನ ಮಾರುಕಟ್ಟೆಯಲ್ಲಿ ಪ್ರತಿ ಬಾಬಿಗೂ ಬೆಲೆ ನಿಷ್ಕರ್ಷಿಸಿದನು ; ಬಜಾರಿನಲ್ಲಿ ಅವನಿಲ್ಲದೆ ಆಗುತ್ತಿರಲಿಲ್ಲ. ಲಕ್ಷಾಂತರ ರೂಪಾಯಿ ಶೇಖರಿಸಿದನು ; ಒಂದು ನಿವಾಸ ಕಟ್ಟಿಸಲು ನಿರ್ಧರಿಸಿದನು ; ಮಿತ್ತರ್‌ರರ ನಿವಾಸದ ಹತ್ತಿರದಲ್ಲೇ ಅವರ ಭವ್ಯಗೃಹದ ಎರಡರಷ್ಟು ದೊಡ್ಡ ಹರ್ಮ್ಯ ಕಟ್ಟಿಸಿದನು ; ಅದು ಭಾರಿ ಅರಮನೆಯಂತಿದ್ದು ಉತ್ತರ ಕಲ್ಕತ್ತಾದಲ್ಲಿ ಅತಿ ಎತ್ತರ ಮತ್ತು ದೊಡ್ಡದಾಗಿತ್ತು.

ತನ್ನ ಪತಿಯ ಗೌರವವನ್ನು ಎತ್ತಿಹಿಡಿದ ನಂತರ, ಮಿತ್ತರ್‌ರರ ಹಿರಿಮಗಳ ಮನಸ್ಸಿನಲ್ಲಿ ಶಾಂತಿ ನೆಮ್ಮದಿ ನೆಲೆಸಿತು.

SHAKTI
SUDHA

A Superb Tonic

Protect the Cow

Silver Jubilee of Gorakshana

When Journals devoted to the pious and noble cause of cow-protection, kindness to animals, ahimsa, etc., are very few and dharmic papres are short-lived, it is rejoicing that the 'Gorakshana' will be celebrating its uniqe Silver jubilee early and in a befitting manner. Donations and Messages from philanthropic, Gomata-interested humanitarian persons are fervently solicited, and this act of kindness will be gratefully acknowledged and ever remembered.

Editor 'Gorakshana" Chamarajapuam, Mysore 4

ಭಾರತದಲ್ಲಿ ಗೋವಧೆ
ಪೂರ್ಣ ನಿಶೇಧವಾಗಲಿ

•

Help The Gorakshana

—Humanitarian Propoganda Monthly....

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore